# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 453 |
| ಸದಸ್ಯರ ಹೆಸರು | : | ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 10-12-2025 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರ.ಸಂ. | ಪ್ರಶ್ನೆಗಳು | ಉತ್ತರ |
|---|---|---|
| ಅ. | ರಾಜ್ಯದಲ್ಲಿ ಉತ್ತರ ಕರ್ನಾಟಕವನ್ನು ದಕ್ಷಿಣ ಕರ್ನಾಟಕದ ಜೊತೆಗೆ ಸಂಪರ್ಕ ಬೆಸೆಯುವ ಯಾವುದೇ ಚತುಷ್ಪಥ ರಸ್ತೆಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಕೈಗೊಂಡ ಕ್ರಮಗಳೇನು: ಇಂತಹ ಚತುಷ್ಪಥ ರಸ್ತೆ ನಿರ್ಮಾಣದ ಯಾವುದಾದರು ಪ್ರಸ್ತಾವನೆಗಳು ಸರಕಾರದ ಮುಂದೆ ಇವೆಯೇ; | ಉತ್ತರ ಕರ್ನಾಟಕವನ್ನು ದಕ್ಷಿಣ ಕರ್ನಾಟಕದ ಜೊತೆಗೆ ಪ್ರಮುಖವಾಗಿ NH-50 NH –150, NH –150(A), NH–52, NH –48 ಹೆದ್ದಾರಿಗಳು ಬೆಸೆಯುತ್ತವೆ.<br>• ಇವುಗಳ ಒಟ್ಟಾರೆ ಉದ್ದವು 2412.78 ಕಿ.ಮೀ ಆಗಿರುತ್ತದೆ.<br>• ಈಗಾಗಲೇ 536.30 ಕಿಮೀ ಉದ್ದವು 4 ಲೇನ್ ಆಗಿರುತ್ತದೆ<br>• 487 ಕಿ.ಮೀ ಉದ್ದವು 6 ಲೇನ್ ಆಗಿರುತ್ತದೆ ಮತ್ತು 153.12 ಕಿ.ಮೀ ಉದ್ದಕ್ಕೆ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವತಿಯಿಂದ 6 ಲೇನ್ ಕಾಮಗಾರಿ ಪ್ರಗತಿಯಲ್ಲಿದೆ.<br>• ಪ್ರಸ್ತುತ 525.85 ಕಿ.ಮೀ ಉದ್ದಕ್ಕೆ 2ಲೇನ್ ರಸ್ತೆಯನ್ನು ಚತುಷ್ಪಥ ರಸ್ತೆಯನ್ನಾಗಿ (4L) ನಿರ್ಮಿಸಲು ವಿಸ್ತೃತ ಯೋಜನಾ ವರದಿಯನ್ನು ತಯಾರಿಸಲು ಕ್ರಮ ವಹಿಸಲಾಗುತ್ತಿದೆ.<br>• 62.75 ಕಿ.ಮೀ ಉದ್ದದ Inter Mediate ರಸ್ತೆಯನ್ನು (2L+PS) ಅಗಲೀಕರಣಗೊಳಿಸಲು ವಿಸ್ತೃತ ಯೋಜನಾ ವರದಿಯನ್ನು ತಯಾರಿಸಲು ಕ್ರಮ ವಹಿಸಲಾಗುತ್ತಿದೆ.<br><br>**ಒಟ್ಟಾರೆ ವಿವರಗಳು ಕೆಳಕಂಡಂತಿದೆ.**<br><br>**1. NH-50(ಬೀದರ್ ಜಿಲ್ಲೆಯ ಕಮಲಾನಗರ ದಿಂದ ಪ್ರಾರಂಭಗೊಂಡು ಬೀದರ್-ಹುಮನಾಬಾದ್-ಗುಲ್ಬರ್ಗ-ಜೇವರ್ಗಿ-ಸಿಂಧಗಿ-ಬಿಜಾಪುರ-ಇಳಕಲ್ಲು-ಹೊಸಪೇಟೆ-ಚಿತ್ರದುರ್ಗದ ಲಕ್ಕ್ಮೀಸಾಗರದಲ್ಲಿ ಕೊನೆಗೊಳ್ಳುತ್ತದೆ)**<br>ಎ) ಒಟ್ಟು ಉದ್ದ-635 ಕಿ.ಮೀ.<br>ಬಿ) 4ಲೇನ್ ಉದ್ದ-314 ಕಿ.ಮೀ.,<br>ಸಿ) 2ಲೇನ್ ಉದ್ದ- 321 ಕಿ.ಮೀ.<br>ಪ್ರಸ್ತುತ 220.ಕಿ.ಮೀ ಉದ್ದದ 2ಲೇನ್ ರಸ್ತೆಯನ್ನು ಚತುಷ್ಪಥ ರಸ್ತೆಯನ್ನಾಗಿ (4L) ನಿರ್ಮಿಸಲು ವಿಸ್ತೃತ ಯೋಜನಾ ವರದಿಯನ್ನು ತಯಾರಿಸಲು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವತಿಯಿಂದ |

| ಕ್ರ.ಸಂ. | ಪ್ರಶ್ನೆಗಳು | ಉತ್ತರ |
|---|---|---|
| | | ಸಮಾಲೋಚಕರನ್ನು ನೇಮಿಸಲಾಗಿದ್ದು, ದಿ:01.12.2025 ರಂದು ಕರಾರು ಮಾಡಿಕೊಳ್ಳಲಾಗಿದೆ.<br><br>2. **NH-150(ಕಲಬುರಗಿಯ ರಾಜಾಪುರ ಕ್ರಾಸ್‌ನಲ್ಲಿ ಪ್ರಾರಂಭಗೊಂಡು ಗುಲ್ಬರ್ಗ-ಯಾದಗಿರಿ-ತೆಲಂಗಾಣ ಗಡಿಯ ಕಡೇಚೂರ್‌ನಲ್ಲಿ ಕೊನೆಗೊಳ್ಳುತ್ತದೆ)**<br>ಎ) ಒಟ್ಟು ಉದ್ದ-118.47 ಕಿ.ಮೀ.<br>ಬಿ) 2ಲೇನ್ ಉದ್ದ- 118.47 ಕಿ.ಮೀ.<br>ಪ್ರಸ್ತುತ ಸದರಿ ಪೂರ್ಣ **118.47.ಕಿ.ಮೀ** ಉದ್ದಕ್ಕೆ ದ್ವಿಪಥ (2L+PS) ದಿಂದ ಚತುಷ್ಪಥ (4L) ನಿರ್ಮಿಸಲು 2025-26ನೇ ಸಾಲಿನಲ್ಲಿ ಕೇಂದ್ರ ಭೂಸಾರಿಗೆ ಮಂತ್ರಾಲಯ ನವದೆಹಲಿ ವತಿಯಿಂದ ಸಮಾಲೋಚಕರನ್ನು ನೇಮಿಸಿ ವಿಸ್ತೃತ ಯೋಜನಾ ವರದಿಯನ್ನು ತಯಾರಿಸಲು ಅನುಮೋದನೆ ನೀಡಲಾಗಿದ್ದು, ಅದರಂತೆ ಪ್ರಾದೇಶಿಕ ಅಧಿಕಾರಿಗಳು ಕೇಂದ್ರ ಭೂಸಾರಿಗೆ ಮಂತ್ರಾಲಯ ಬೆಂಗಳೂರು ರವರ ವತಿಯಿಂದ ಸಮಾಲೋಚಕರನ್ನು ನೇಮಿಸಲು ದಿನಾಂಕ: 11.07.2025 ರಂದು ಟೆಂಡರ್ ಆಹ್ವಾನಿಸಲಾಗಿತ್ತು. ಸದರಿ ಟೆಂಡರನ್ನು ದಿನಾಂಕ: 16.10.2025 ರಂದು ತಾಂತ್ರಿಕ ಕಾರಣಗಳಿಂದಾಗಿ ಪ್ರಾದೇಶಿಕ ಅಧಿಕಾರಿ, ಕೇಂದ್ರ ಭೂ ಸಾರಿಗೆ ಮಂತ್ರಾಲಯ ಇವರು ರದ್ದುಪಡಿಸಿದ್ದು, ಸದರಿಯವರಿಂದ ಮುಂದಿನ ಕ್ರಮದ ಬಗ್ಗೆ ನಿರೀಕ್ಷಿಸಲಾಗಿದೆ.<br><br>3. **NH-150(A)(ಜೇವರ್ಗಿಯಲ್ಲಿ ಪ್ರಾರಂಭಗೊಂಡು ಶಾಹಪೂರ್-ಸುರಪುರ್-ಲಿಂಗಸಗೂರ್-ಸಿಂಧನೂರು-ಬಳ್ಳಾರಿ-ಚಳ್ಳಕೆರೆ-ತುರುವೇಕೆರೆ-ನಾಗಮಂಗಲ-ಪಾಂಡವಪುರ-ಶ್ರೀರಂಗಪಟ್ಟಣ-ನಂಜನಗೂಡು-ಚಾಮರಾಜನಗರದಲ್ಲಿ ಕೊನೆಗೊಳ್ಳುತ್ತದೆ)**<br>ಎ) ಒಟ್ಟು ಉದ್ದ- 677.64 ಕಿ.ಮೀ.<br>ಬಿ) 6ಲೇನ್ ಉದ್ದ- 2.35 ಕಿ.ಮೀ,<br>ಸಿ) 4ಲೇನ್ ಉದ್ದ- 112.30 ಕಿ.ಮೀ,<br>ಡಿ) 2ಲೇನ್ ಉದ್ದ- 500.24 ಕಿ.ಮೀ.<br>ಇ) Inter Mediate ಲೇನ್ ಉದ್ದ-62.75<br>**ಪ್ರಸ್ತುತ** 62.75 ಕಿ.ಮೀ ಉದ್ದದ **Inter Mediate** ರಸ್ತೆಯನ್ನು (2L+PS) **ಅಗಲೀಕರಣಗೊಳಿಸಲು ಈ ಕೆಳಕಂಡಂತೆ ಕ್ರಮವಹಿಸಲಾಗಿದೆ.**<br>ಕಿ.ಮೀ. 50.00 (ಹತ್ತಿಗೂಡುರ) ಯಿಂದ ಕಿ.ಮೀ. 89.30 (ತಿಂಥಣಿ) ವರೆಗೆ **ಒಟ್ಟು ಕಿ.ಮೀ.39.30 ಉದ್ದಕ್ಕೆ ದ್ವಿಪಥ** (2L+PS) ನಿರ್ಮಿಸಲು 2025-26ನೇ ಸಾಲಿನಲ್ಲಿ ಕೇಂದ್ರ ಭೂಸಾರಿಗೆ ಮಂತ್ರಾಲಯ |

| ಕ್ರ.ಸಂ. | ಪ್ರಶ್ನೆಗಳು | ಉತ್ತರ |
|---|---|---|
| | | ನವದೆಹಲಿ ವತಿಯಿಂದ ಸಮಾಲೋಚಕರನ್ನು ನೇಮಿಸಿ ವಿಸ್ತೃತ ಯೋಜನಾ ವರದಿಯನ್ನು ತಯಾರಿಸಲು ದಿ:19.06.2025 ರಂದು ಅನುಮೋದನೆ ನೀಡಲಾಗಿದ್ದು, ಟೆಂಡರ್ ಆಹ್ವಾನಿಸಬೇಕಿದೆ.<br><br>ಸರಪಳಿ 89.30 ಕಿ.ಮೀ(ತಿಂಥಣಿ) ರಿಂದ 112.35 ಕಿ.ಮೀ (ಲಿಂಗಸುಗೂರು) ವರೆಗೆ 23.45 ಕಿ.ಮೀ ಉದ್ದಕ್ಕೆ ದ್ವಿಪಥ (2L+PS) ನಿರ್ಮಿಸಲು ಯೋಜನಾ ವರದಿ ತಯಾರಿಕೆಗೆ ಸಮಾಲೋಚಕರನ್ನು ನೇಮಿಸಲಾಗಿದ್ದು ದಿನಾಂಕ: 08.05.2025 ರಂದು ಎಲ್.ಓ.ಎ ನೀಡಲಾಗಿದ್ದು ಯೋಜನಾ ವರದಿ ತಯಾರಿಕೆ ಪ್ರಗತಿಯಲ್ಲಿದೆ.<br><br>**4. NH-52 (ಮಹಾರಾಷ್ಟ ಗಡಿಯಲ್ಲಿ ಪ್ರಾರಂಭಗೊಂಡು ಸೋಲಾಪುರ-ಬಿಜಾಪುರ-ಬಾಗಲಕೋಟೆ-ಹುಬ್ಬಳ್ಳಿ-ಕಲಘಟಗಿ-ಅಂಕೋಲಾದಲ್ಲಿ ಕೊನೆಗೊಳ್ಳುತ್ತದೆ)**<br>ಎ) ಒಟ್ಟು ಉದ್ದ 400.64 ಕಿ.ಮೀ-<br>ಬಿ) 4ಲೇನ್ ಉದ್ದ-110.00 ಕಿ.ಮೀ<br>ಸಿ) 2ಲೇನ್ ಉದ್ದ-290.64 ಕಿ.ಮೀ<br><br>ಸದರಿ ಹೆದ್ದಾರಿಯಲ್ಲಿ ಹಾಲಿ 2ಲೇನ್ ಇರುವ 187.35 ಕಿ.ಮೀ ಉದ್ದವನ್ನು (ಸರಪಳಿ 74.135 ಕಿ.ಮೀ ನಿಂದ (ಹೊಂಗನಹಳ್ಳಿ) ಯಿಂದ ಕಿ.ಮೀ.261.483 (ಹುಬ್ಬಳ್ಳಿ ಬಳಿ)) ಚತುಷ್ಪಥ (4L) ನಿರ್ಮಿಸಲು ಸಮಾಲೋಚಕರನ್ನು ನೇಮಿಸಿ ವಿಸ್ತೃತ ಯೋಜನಾ ವರದಿಯನ್ನು ತಯಾರಿಸಲು ಅನುಮೋದನೆ ನೀಡಲಾಗಿದ್ದು, ಅದರಂತೆ ಪ್ರಾದೇಶಿಕ ಅಧಿಕಾರಿಗಳು ಕೇಂದ್ರ ಭೂಸಾರಿಗೆ ಮಂತ್ರಾಲಯ ಬೆಂಗಳೂರು ರವರ ವತಿಯಿಂದ ಸಮಾಲೋಚಕರನ್ನು ನೇಮಿಸಲು ದಿನಾಂಕ: 17.07.2025 ರಂದು ಟೆಂಡರ್ ಆಹ್ವಾನಿಸಲಾಗಿತ್ತು. ಸದರಿ ಟೆಂಡರನ್ನು ತಾಂತ್ರಿಕ ಕಾರಣಗಳಿಂದಾಗಿ ಪ್ರಾದೇಶಿಕ ಅಧಿಕಾರಿ, ಕೇಂದ್ರ ಭೂ ಸಾರಿಗೆ ಮಂತ್ರಾಲಯ ಇವರು 16.10.2025 ರಂದು ರದ್ದುಗೊಳಿಸಿದ್ದು, ಸದರಿಯವರಿಂದ ಮುಂದಿನ ಕ್ರಮದ ಬಗ್ಗೆ ನಿರೀಕ್ಷಿಸಲಾಗಿದೆ.<br><br>**5. NH-48(ಮಹಾರಾಷ್ಟ್ರ ಗಡಿಯ ಕೋಗನಲ್ ನಲ್ಲಿ ಪ್ರಾರಂಭಗೊಂಡು ನಿಪ್ಪಾಣಿ-ಬೆಳಗಾವಿ-ಹುಬ್ಬಳ್ಳಿ-ಚಿತ್ರದುರ್ಗ-)**<br>(ಎ) ಒಟ್ಟು ಉದ್ದ-581.00 ಕಿ.ಮೀ<br>(ಬಿ) 6ಲೇನ್ ಉದ್ದ-427.88 ಕಿ.ಮೀ<br>(ಸಿ) ಬಾಕಿ 153.12ಕಿ.ಮೀ ಉದ್ದವನ್ನು 6 ಪಥಕ್ಕೆ ಅಭಿವೃದ್ದಿಗೊಳಿಸಲು NHAI ವತಿಯಿಂದ ಕಾಮಗಾರಿಯು |

| ಕ್ರ.ಸಂ. | ಪ್ರಶ್ನೆಗಳು | ಉತ್ತರ |
|---|---|---|
| | | ಪ್ರಗತಿಯಲ್ಲಿದೆ. |
| ಆ) | ಕರ್ನಾಟಕವನ್ನು ಬೆಸೆಯುವ ಉತ್ತರದಿಂದ ದಕ್ಷಿಣ ಕರ್ನಾಟಕಕ್ಕೆ ಸಂಪರ್ಕ ಕಲ್ಪಿಸುವ ಬೀದರ್, ಚಾಮರಾಜನಗರ (ವಯಾ ಕಲಬುರಗಿ) ಹೆದ್ದಾರಿ "ಕಲ್ಯಾಣ ಪಥ" ಚತುಷ್ಪಥ ರಸ್ತೆ ನಿರ್ಮಾಣದ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು; ಈ ಬಗ್ಗೆ ರಾಜ್ಯ ಸರ್ಕಾರವು ಕೇಂದ್ರಕ್ಕೆ ಯಾವುದಾದರು ಪ್ರಸ್ತಾವನೆ ಸಲ್ಲಿಸಿದೆಯೇ: ಸಲ್ಲಿಸದ್ದಲ್ಲಿ ಪ್ರಸ್ತಾವನೆ ಯಾವ ಹಂತದಲ್ಲಿದೆ; | ಕಲ್ಯಾಣ ಪಥ ಯೋಜನೆಯನ್ನು ಕೆ.ಆರ್.ಆರ್.ಡಿ.ಎ ವತಿಯಿಂದ ಕೈಗೊಳ್ಳಲಾಗುತ್ತಿದ್ದು, ಸದರಿಯವರು ಈ ಕೆಳಕಂಡಂತೆ ವರದಿಸಿರುತ್ತಾರೆ.<br>1. ಪ್ರಸ್ತುತ ಕಲ್ಯಾಣ ಪಥ ಯೋಜನೆಯಡಿ ಒಟ್ಟು 1124.70 ಕಿ.ಮೀ. ಉದ್ದದ ರಸ್ತೆ ಕಾಮಗಾರಿಗಳು ರೂ.1000.00 ಕೋಟಿಗಳ ಅನುದಾನದಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ. ಸದರಿ ಯೋಜನೆ ಕಾಮಗಾರಿಗಳು ವಿವಿಧ ಹಂತದ ಪ್ರಗತಿಯಲ್ಲಿದ್ದು, 2025–26ನೇ ಸಾಲಿನಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ. ಒಟ್ಟು 286 ಕಾಮಗಾರಿಗಳನ್ನು ಕೈಗೊಂಡಿದ್ದು ಹಾಲಿ ಹಂತಕ್ಕೆ 281 ಕಾಮಗಾರಿಗಳು ಪ್ರಗತಿಯಲ್ಲಿವೆ. 05 ಕಾಮಗಾರಿಗಳ ಟೆಂಡರ್ ಪ್ರಕ್ರಿಯಯಲ್ಲಿದೆ. 75.00 ಕಿ.ಮೀ ಉದ್ದವನ್ನು ಪೂರ್ಣಗೊಳಿಸಿದ್ದು, ರೂ.150.00 ಕೋಟಿ ವೆಚ್ಚ ಮಾಡಲಾಗಿದೆ.<br>2. ಗ್ರಾಮೀಣ ರಸ್ತೆ ಸಂಪರ್ಕವು ಗ್ರಾಮೀಣ ಕ್ಷೇತ್ರದ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿ ಹೆಚ್ಚಿಸುವಲ್ಲಿ ಪ್ರಮುಖ ಅಂಶವಾಗಿರುವುದರಿಂದ ಗ್ರಾಮೀಣ ರಸ್ತೆಗಳನ್ನು ಸರ್ವಋತು ರಸ್ತೆಗಳನ್ನಾಗಿ ಅಭಿವೃದ್ಧಿಪಡಿಸುವ ಅಗತ್ಯತೆ ಇರುತ್ತದೆ. ಗ್ರಾಮೀಣ ರಸ್ತೆಗಳನ್ನು ಸರ್ವಋತು ರಸ್ತೆಗಳನ್ನಾಗಿ ಅಭಿವೃದ್ಧಿಪಡಿಸುವುದರಿಂದ ಗ್ರಾಮೀಣ ಭಾಗದ ಜನರಿಗೆ ಜಿಲ್ಲಾ/ ತಾಲ್ಲೂಕು ಕೇಂದ್ರಕ್ಕೆ ಹಾಗೂ ಮಾರುಕಟ್ಟೆ/ಆಸ್ಪತ್ರೆ/ ಶೈಕ್ಷಣಿಕ ಕೇಂದ್ರಗಳಿಗೆ ಸಂಪರ್ಕ ದೊರಕಲಿದ್ದು ಆರ್ಥಿಕ ಮತ್ತು ಸಾಮಾಜಿಕ ಬೆಳವಣಿಗೆಗೆ ಪೂರಕವಾಗುವುದು. ಈ ಹಿನ್ನೆಲೆಯಲ್ಲಿ ಕಲ್ಯಾಣ–ಕರ್ನಾಟಕ ಪ್ರದೇಶಗಳಾದ ಬೀದರ್, ಕಲಬುರಗಿ, ಯಾದಗಿರಿ, ಕೊಪ್ಪಳ, ರಾಯಚೂರು, ಬಳ್ಳಾರಿ ಮತ್ತು ವಿಜಯನಗರ ಪ್ರದೇಶಗಳಲ್ಲಿ ಕಲ್ಯಾಣ ಪಥ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. |
| ಇ) | ಈ ಹಿಂದೆ ರಾಜ್ಯ ಸರ್ಕಾರವು ಈ ಬೃಹತ್ ಚತುಷ್ಪಥ ಹೆದ್ದಾರಿ ಯೋಜನೆಗೆ ಅನುಮೋದನೆ ನೀಡಿದ್ದು, 1000 ಕೋಟಿ ರೂ.ಅನುದಾನವನ್ನು ಮೀಸಲಿರಿಸಲಾಗಿದೆ ಎಂದು ತಿಳಿದು ಬಂದಿದ್ದು ಇಲ್ಲಿಯವರೆಗೆ ಯಾವುದೇ ಕಾಮಗಾರಿಗಳು ಪ್ರಾರಂಭಿಸದೇ ಇರಲು ಕಾರಣವೇನು; ಯಾವ ಕಾಲಮಿತಿಯಲ್ಲಿ ಈ "ಕಲ್ಯಾಣ ಪಥ" ಯೋಜನೆಯನ್ನು ಪ್ರಾರಂಭಿಸಿ ಮುಕ್ತಾಯಗೊಳಿಸಲಾಗುವುದು; (ಸಂಪೂರ್ಣ ಉತ್ತರವನ್ನು ಒದಗಿಸುವುದು) | |
| ಈ) | ಈ ಯೋಜನೆಯ ವಿಸ್ತೃತ ಯೋಜನಾ ವರದಿಯ ಅಂಶಗಳಾವುವು? (ಸಂಪೂರ್ಣ ಮಾಹಿತಿಯನ್ನು ನೀಡುವುದು) | |

ಸಂಖ್ಯೆ: ಲೋಇ 455 ಸಿಎನ್‌ಹೆಚ್ 2025 (ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು